ಅನಾಮತ್ತು ಎತ್ತಿ ಕೂಡ್ರಿಸಿ ನಿಮಿಷಗಟ್ಟಲೇ ತುಟಿಯ ಮೇಲ್ಭಾಗವನ್ನ, ಕೆನ್ನೆಯ ಇಳಿಜಾರನ್ನ ಅಚ್ಚೆಯಿಂದ ಸವರುವಾಗ ಅವನ ಕಣ್ಣಲ್ಲಿರುವ ತೃಪ್ತಿ ಇವೆಲ್ಲವೂ ಜ್ಯೋತ್ಸ್ನಾಳನ್ನು ಸದಾ ಆತಂಕಕ್ಕೆ ಈಡುಮಾಡುತ್ತಿತ್ತು. ನೀಲ್‌ನ ಋಣಭಾರದಲ್ಲಿ ಬಿದ್ದಂತೆ ಭಾಸವಾಗುತ್ತಿತ್ತು. ಕಾಸಿನಕಡ್ಡಿ ಪ್ರಯೋಜನವಿಲ್ಲದ ಮಾತಿಗೆ ತಾನು ಹಟಮಾರಿ ಮಗುವಂತೆ ರಚ್ಚೆ ಹಿಡಿದಾಗ ಅವನು ತಲೆನೇವರಿಸಿ ತೋರುವ ಕಾಳಜಿ, ಪ್ರಣಯದ ಉತ್ಕಟತೆಯಲ್ಲಿ ಸದಾ ತನ್ನನ್ನೇ ಗೆಲ್ಲಿಸುವ ಅವನ ನಡೆ ಅವಳಿಗೆ ತಾಯ್ತನದಂತೆ ಭಾಸವಾಗುತ್ತಿತ್ತು.

ಎಷ್ಟೋ ರಾತ್ರಿ, ಲಿಯೊ ಮಲಗಿದ ಮೇಲೆ ಬಾಲಿವುಡ್ ಸಿನಿಮಾಗಳನ್ನ, ಡಾಕ್ಟರ್ ರಾಜಕುಮಾರ್ ಸಿನಿಮಾಗಳನ್ನ ನೀಲ್ ಜತೆಯಲ್ಲಿ ನೋಡುತ್ತ ಸೀನುಗಳನ್ನು ಜ್ಯೋತ್ಸ್ನಾ ವಿವರಿಸುತ್ತಿದ್ದಳು. ಫೋನಿನಲ್ಲಿ ಅಪ್ಪ ಹೇಳಿದ್ದ ಊರಿನ ಕಥೆಗಳನ್ನೆಲ್ಲ ಅಭಿನಯದೊಂದಿಗೆ ತೋರಿಸಿ ಅರ್ಥ ಮಾಡಿಸಲು ಹೆಣಗಾಡುತ್ತಿದ್ದಳು. ಭಾಷಾಂತರ ಸಾಧ್ಯವಿಲ್ಲದ ಪದಗಳನ್ನು ಭಾವಾಂತರವಾಗಿಸಿ ಹಗುರಾಗುತ್ತಿದ್ದಳು. ಇಂತಹ ಸನ್ನಿವೇಶಗಳಲ್ಲಿ ಜಾದೂ ಮಾಡಿದಂತೆ ತನ್ನ ಋಣಭಾರ ಕಡಿಮೆಯಾದ ಅನುಭವವಾಗಿ ಆಶ್ಚರ್ಯಪಡುತ್ತಿದ್ದಳು. ಇದಕ್ಕೆಲ್ಲ ಕಾರಣ ಹುಡುಕಿ ಸಿಗದೇ ಪೆಚ್ಚಾಗುತ್ತಿದ್ದಳು.

ಕಣ್ಣಳತೆಯ ದೂರದಲ್ಲಿರುವುದು ನಾಯಿಯಾ ನರಿಯಾ ಅಥವಾ ತೋಳವಿದ್ದರೂ ಇರಬಹುದಾ ಎಂಬ ತಾಕಲಾಟದಲ್ಲಿ ಇರುವಾಗಲೆಲ್ಲ ತನ್ನೂರಿನ ಮನೆಯ ಮಾಯ್ಕಾರನಂತಿದ್ದ ಮೇಲಿನಮಾಳಿಗೆಯ ಮರದ ಕಿಟಕಿಯ ಹಂಬಲ ಅವಳನ್ನು ಮತ್ತೆ ಮತ್ತೆ ಕಾಡುತ್ತಿತ್ತು. ಈ ಮಾಯ್ಕಾರನ ಮೈಮೇಲಿನ ಚಿತ್ತಾರದ ಮೇಲೆ ಕೈಯ್ಯಾಡಿಸಿದರೆ ಆಗುವ ಸಮಾಧಾನಕ್ಕಾಗಿ ಇನ್ನಿಲ್ಲದೆ ಹಪಹಪಿಸುತ್ತಿದ್ದಳು.

ಇಂಥದ್ದೇ ಒಂದು ಸಂಜೆ, ರೆಸ್ಟುರಾದಲ್ಲಿ ಊಟಕ್ಕೆಂದು ಭೇಟಿಯಾಗಿ ನೀಲ್ ತನ್ನ ಅಪ್ಪಅಮ್ಮನಿಗೆ ಜ್ಯೋತ್ಸ್ನಾಳನ್ನು ಪರಿಚಯ ಮಾಡಿಕೊಟ್ಟ. ಮಗನ ಸಂಕಟವನ್ನ ಕಂಡಿದ್ದ ತಾಯಿ, ಹುಡುಗಿಯೊಬ್ಬಳೊಂದಿಗೆ ಮಗ ಖುಷಿಯಾಗಿದ್ದುದನ್ನು ನೋಡಿ ತಾನೂ ಖುಷಿಯಾದಳು.

ಜ್ಯೋತ್ಸ್ನಾ ಅಪ್ಪಅಮ್ಮನಿಗೆ ಫೋನ್ ಮಾಡಿ ನೀಲ್‌ನ ವಿಷಯ ತಿಳಿಸಿದಳು. ಅವರು ಸಮಾಧಾನದಿಂದ ಕೇಳಿಸಿಕೊಂಡರು. ಇಂಗ್ಲೆಂಡಿನಲ್ಲಿ ಕೈತುಂಬ ಸಂಪಾದಿಸುವ, ಮೂವತ್ತರ ಎಡಬಲದಲ್ಲಿರುವ ಮಗಳಿಗೆ ಬದುಕಿನ ಇಳಿಜಾರಿನಲ್ಲಿರುವ ತಾವೇನು ಹೇಳಲಾದೀತು ಎಂಬಂತೆ ಸುಮ್ಮನಾಗಿದ್ದರು. ಗದ್ದೆಮೂಲೆಯ ರಮೂನ ಮನೆಯವರಿಗೂ ಕೆರೆತುದಿಯ ನಾಲ್ಕೈದು ಮನೆಯವರಿಗೂ ರಮೂನ ಮದುವೆಯ ಕಾರಣವಾಗಿ ಗಲಾಟೆಯಾಗಿರುವ ವಿಷಯವನ್ನು ಸಹಜವಾಗಿಯೇ ಹೇಳಿ ಮಗಳ ಜೀವನದ ಗಂಭೀರ ಸಂದರ್ಭವನ್ನು ಹಗುರಮಾಡಲು ನೋಡಿದ್ದರು.

ಮುಂದೆ ತಿಂಗಳೊಪ್ಪತ್ತಿನಲ್ಲೇ ಒಂದು ಭಾನುವಾರದ ನಡುಮುಂಜಾನೆ, ನೀಲ್‌ನ ಮನೆಯ ಬ್ಯಾಕ್ ಗಾರ್ಡನ್‌ನಲ್ಲಿ ಹಾಕಿದ್ದ ಬಿಳಿಯ ಗಝೀಬೊದ ಕೆಳಗೆ ಕೆಲವಷ್ಟೇ ಆತ್ಮೀಯರ ಸಮ್ಮುಖದಲ್ಲಿ, ರೆಜಿಸ್ಟ್ರಾರ್ ಎದುರು ಮದುವೆ ರೆಜಿಸ್ಟ್ರೇಷನ್ನಿನ ಪತ್ರಕ್ಕೆ ಜ್ಯೋತ್ಸ್ನಾ ಮತ್ತು ನೀಲ್ ಸಹಿ ಮಾಡಿದರು. ಅದೇ ಸಂಜೆ ಡಡ್ಲಿಯ ತಿರುಮಲ ದೇವಸ್ಥಾನದಲ್ಲಿ ಗೋಧೂಳಿ ಮುಹೂರ್ತಕ್ಕೆ ಸರಿಯಾಗಿ ಹಾರ ಬದಲಾಯಿಸಿಕೊಂಡರು. ವಾರ, ತಿಂಗಳುಗಳು ಇವರ ಮೇಲೆ ದಯೆಯಿರಿಸಿ ಹಾಯಾಗಿ ಕಳೆದುಹೋಗುತ್ತಿದ್ದವು.

* * *

ಬೆಂಗಳೂರಿಗೆ ನೀಲ್ ಮತ್ತು ನೀಲ್‌ನ ಜೋಹ್ ಬಂದಿಳಿದಾಗ ಸಂಜೆ ಆರು ಗಂಟೆ. ಬೇರೆ ಹಲವು ದೇಶಗಳನ್ನು ತಿರುಗಿದ್ದ ನೀಲ್‌ಗೆ ಭಾರತದ ಪ್ರಯಾಣ ಹೊಸದು. ತನ್ನೂರಿನ ಬಗ್ಗೆ, ತನ್ನವರ ಬಗ್ಗೆ ಕಣ್ಣಿಗೆ ಕಟ್ಟುವಂತೆ ವಿವರಿಸಿ ಸಾಕಷ್ಟು ತಯಾರಿ ನಡೆಸಿದ್ದಳಾದರೂ ಜ್ಯೋತ್ಸ್ನಾಗೆ ಒಂಚೂರು ಕಸಿವಿಸಿ. ನೀಲ್ ಅವಳ ತದ್ವಿರುದ್ಧ. ಲಿಯೊನನ್ನು ತನ್ನ ತಾಯಿಯೊಂದಿಗೆ ಬಿಟ್ಟುಬಂದ ಅಳುಕೊಂದನ್ನು ಹೊರತುಪಡಿಸಿ ಇನ್ಯಾವ ಚಿಂತೆಯೂ ಅವನಲ್ಲಿ ಇದ್ದಂತಿರಲಿಲ್ಲ. ಜ್ಯೋತ್ಸ್ನಾಳನ್ನು ಲಲ್ಲೆಗರೆಯುತ್ತ, ಪ್ರತಿಯೊಂದು ಹೆಜ್ಜೆಗೂ ಅವಳ ಕಣ್ಸನ್ನೆಯ ಒಪ್ಪಿಗೆ ಕಾಯುತ್ತ ಅವಳ ಹಿಂದೆಮುಂದೆಯೇ ಸುತ್ತುತ್ತಿದ್ದ.

ಇಬ್ಬರೂ ಊರು ತಲುಪಿದಾಗ ಚುಮುಚುಮು ಬೆಳಗು. ನೀಲ್ ರಾತ್ರಿಯಿಡೀ ಹೊರಗೆ ನೋಡುತ್ತ ಕುಳಿತಿದ್ದ. ಪ್ಯಾರಾಡೈಮ್ ಶಿಫ್ಟಿಗೆ ರೆಡಿಯಾಗಿಯೇ